ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.

ಸಿ.ಸಿ ನಂಬರ್ಃ **1947/2023**

ಪಿರ್ಯಾದಿಃ ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸ್,
ಮೂಡಿಗೆರೆ ತಾಲ್ಲೂಕು.

ವಿರುದ್ಧ

ಆರೋಪಿಃ ಹೇಮಂತ್ ಕುಮಾರ್.ಎಸ್.ಪಿ ಬಿನ್ ಪರಮೇಶಪ್ಪ,
ವಯಸ್ಸು ಸುಮಾರು 38 ವರ್ಷ,
ವಾಸಃ ಶಿವನಿ ಗ್ರಾಮ, ಅಜ್ಜಂಪುರ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

* * * * *

ದಂಡ ಪ್ರಕ್ರಿಯಾ ಸಂಹಿತೆ **313** ರ ಅಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿಯ ಹೇಳಿಕೆ

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆಃ 2) ಫ್ರಾಸಾ-1 ಶಿವಯೋಗಯ್ಯ ಹಿರೇಮಠ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.12.08.2023 ರಂದು ಕಾರ್ಕಳದ ಬಾಲಾಜಿ INC ನಿಂದ ಬೆಂಗಳೂರಿಗೆ ಹೋಗಲು ಬೆಳಗ್ಗೆ ಸುಮಾರು 10.00 ರಿಂದ 10.30 ರ ಸಮಯಕ್ಕೆ ಅವರ ಮಾರುತಿ ಸ್ವಿಫ್ಟ್ ಕಾರು ಸಂ.KA-05-NE-9872 ಕಾರ್ ನಲ್ಲಿ ಅವರು, ಅವರ ಪತ್ನಿ ಮತ್ತು ಅವರ ಮಗ ನಿರಂಜನ್ ಹಿರೇಮಠ್ ಹೊರಟು ಮೂಡಿಗೆರೆಯ ಒಂದು ಕಾಫೀಕ್ಯೂರಿಂಗ್ ಬಳಿ ಬರುತ್ತಿದ್ದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 3) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅವರು ರಸ್ತೆಯ ಎಡಬದಿಯಲ್ಲಿ ಇದ್ದಾಗ ಎದುರಿನಿಂದ ಸರ್ಕಾರಿ ಬಸ್ ಸಂ.KA-04-F-0506 ರ ಚಾಲಕ ಅತೀವೇಗ, ಅಜಾಗರುಕತೆ ಮತ್ತು ನಿರ್ಲಕ್ಷ್ಯತನದಿಂದ ಒವರ್ ಟೇಕ್ ಮಾಡಿಕೊಂಡು ಬಂದು ಅವರ ಕಾರಿಗೆ ಡಿಕ್ಕಿಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 4) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅಪಘಾತವಾದ ನಂತರ ಅವರಿಗೆ ಪ್ರಜ್ಞೆ ತಪ್ಪಿದ್ದು, ನಂತರ ಆಂಬುಲೆನ್ಸ್ ಬಂದಾಗ ಅವರು ಅವರ ಮಗ ಮತ್ತು ಪತ್ನಿಯನ್ನು ನೋಡಿದ್ದು,

ಅವರ ಮಗನ ಎಡಭಾಗ ತಲೆ ಮತ್ತು ಶರೀರದ ಮೇಲೆ ರಕ್ತ ಒಣಗಿತ್ತು ಹಾಗೂ ಅವರ ಪತ್ನಿಯ ತಲೆ ಮತ್ತು ಮೂಗಿನಿಂದ ರಕ್ತ ಬರುತ್ತಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 5) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರನ್ನು ಮತ್ತು ಅವರ ಪತ್ನಿಯನ್ನು ಒಂದೇ ಆಂಬುಲೆನ್ಸ್ ನಲ್ಲಿ ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ಅಪಘಾತದಿಂದ ಅವರ ಬಾಯಿ, ತಲೆ, ಹಣೆ, ಗದ್ದ, ಎದೆ ಮತ್ತು ಬೆನ್ನಿಗೆ ತೀವ್ರ ಗಾಯವಾಗಿ ರಕ್ತ ಸುರಿಯುತ್ತಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 6) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ಆಸ್ಪತ್ರೆಯಲ್ಲಿ ಇರುವಾಗ ಅವರ ಪತ್ನಿ ಹಾಗೂ ಮಗ ಮೃತರಾಗಿದ್ದಾರೆ ಎಂದು ತಿಳಿದುಬಂತು. ತಕ್ಷಣ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿಗೆ ಕಳುಹಿಸಿದ್ದು, ಅವರು ಮೂಡಿಗೆರೆ ಆಸ್ಪತ್ರೆಯಲ್ಲಿ ಇದ್ದಾಗ ಮೂಡಿಗೆರೆ ಪೋಲಿಸರು ಬಂದು ಅವರ ಹೇಳಿಕೆ ದಾಖಲಿಸಿಕೊಂಡಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 7) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಮಂಗಳೂರಿನಿಂದ ಹುಬ್ಬಳ್ಳಿಗೆ ಹೋಗಿ ಕೆಎಲ್ಇ ಆಸ್ಪತ್ರೆಯಲ್ಲಿ 8 ದಿನ ಚಿಕಿತ್ಸೆ ಪಡೆದುಕೊಂಡಿದ್ದು ಇಲ್ಲಿಯವರೆಗೂ ಚಿಕಿತ್ಸೆ ಪಡೆಯುತ್ತಲೇ ಇರುತ್ತೇನೆ, ನಂತರ ದಿ.18.10.2023 ರಂದು ಪೋಲಿಸರು ಅವರನ್ನು ಮುಂದುವರೆದ ವಿಚಾರಣೆ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 8) ಫ್ರಾಸಾ-2 ಅನ್ನಪೂರ್ಣ ಕುಬ್ಬಿ ಹಾಳಮಠ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.12.08.2023 ರಂದು ಮ.2.30 ರ ಸಮಯಕ್ಕೆ ಚಾಸಾ-2 ರವರು ಅವರ ಗಂಡನ ಮೊಬೈಲ್ ಗೆ ದೂರವಾಣಿ ಕರೆ ಮಾಡಿದ್ದು ಅದನ್ನು ಸ್ವೀಕರಿಸಿದಾಗ ಮೂಡಿಗೆರೆಯಲ್ಲಿ ಅಪಘಾತವಾಗಿದ್ದು ಅವರು ನಿಮ್ಮ ಕಡೆಯವರ ಎಂದು ಹೇಳಿ ವಾಟ್ಸಪ್ ನಲ್ಲಿ ಚಾಸಾ-1 ಮತ್ತು ಮೃತ ಪೂಜಾ ರವರ ಆಧಾರ್ ಕಾರ್ಡ್ ಫೋಟೋಗಳನ್ನು ಕಳುಹಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 9) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-2 ರವರಿಗೆ ಅವರು ನಮ್ಮ ಕಡೆಯವರೇ ಎಂದು ಹೇಳಿದಾಗ ಚಾಸಾ-1 ರವರಿಗೆ ತಲೆಗೆ ಏಟಾಗಿದ್ದು ಅವರನ್ನು ಆಸ್ಪತ್ರೆಗೆ ಕಳುಹಿಸುವುದಾಗಿ ಹಾಗೂ ಅವರ ಪತ್ನಿ ಮತ್ತು ಮಗನಿಗೆ ಉಸಿರು ಇಲ್ಲ ಎಂದು ತಿಳಿಸಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 10) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ಬೆಂಗಳೂರಿನಿಂದ ಹೊರಟು ಮೂಡಿಗೆರೆ ಪೋಲಿಸ್ ಠಾಣೆಗೆ ತಲುಪಿದ್ದು, ನಂತರ ಪೋಲಿಸರು ಅವರನ್ನು ಶವಗಳನ್ನು ಗುರುತಿಸುವ ಸಲುವಾಗಿ ಎಂ.ಜಿ.ಎಂ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪೂಜಾ ಹಿರೇಮಠ್ ಹಾಗೂ ನಿರಂಜನ್ ಹಿರೇಮಠ್ ರವರ ಮೃತ ದೇಹವನ್ನು ತೋರಿಸಿದರು ಆಗ ಅವರು ಅವರನ್ನು ಗುರುತಿಸಿದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 11) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಮೃತ ಪೂಜಾ ಹಿರೇಮಠ್ ರವರ ಶವದ ಪೋಸ್ಟ್ ಮಾರ್ಟಮ್ ಎಂದು ವೈದ್ಯರು ಹಾಜರಾಗಿ ಅವರಿಗೆ ಆದ ಗಾಯಗಳನ್ನು ಅವರಿಗೆ ತೋರಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 12) ಫ್ರಾಸಾ-6 ಸಂತೋಷ್ ಕುಮಾರ್.ಹೆಚ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.12.08.2023 ರಂದು ಸ್ವಿಫ್ಟ್ ಕಾರು ಮತ್ತು KSRTC ಬಸ್ ನಡುವೆ ಆದ ಅಪಘಾತದ ಸಂಬಂಧ ಸದರಿ KSRTC ಬಸ್ ನ್ನು ಪೋಲಿಸರು ವಶಕ್ಕೆ ಪಡೆದ ಬಗ್ಗೆ ನಿಪಿ-14 ಕ್ಕೆ ಸಹಿ ಮಾಡಿದ್ದು, ಸದರಿ ಬಸ್ ನ ನೋ.ಸಂ.KA-40-F-0506 ಆಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 13) ಫ್ರಾಸಾ-7 ಸೋಮಣ್ಣ.ಎಸ್ ರವರು ತಮ್ಮ ಸಾಕ್ಷ್ಯದಲ್ಲಿ KSRTC ಬಸ್ ಗೆ ಅಪಘಾತದ ಸಂಬಂಧ ಸದರಿ KSRTC ಬಸ್ ನ್ನು ಪೋಲಿಸರು ವಶಕ್ಕೆ ಪಡೆದ ಬಗ್ಗೆ ನಿಪಿ-14 ಕ್ಕೆ ಸಹಿ ಮಾಡಿದ್ದು, ಸದರಿ ಬಸ್ ನ ನೋ.ಸಂ.KA-40-F-0506 ಆಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 14) ಫ್ರಾಸಾ-10 ಡಾಃ ಹೇಮಂತ್ ಭಟ್ ರವರು ತಮ್ಮ ಸಾಕ್ಷ್ಯದಲ್ಲಿದಿ.12.08.2023 ರಂದು

ಮ.2.15 ರ ಸಮಯಕ್ಕೆ ಚಾಸಾ-1 ರವರು ಆ ದಿನ ಮ.1.45 ರ ಸಮಯಕ್ಕೆ ಮುದ್ರೆಮನೆ ಕಾಫೀ ಕ್ಯೂರಿಂಗ್ ಬಳಿ ರಸ್ತೆ ಅಪಘಾತಾಕ್ಕೆ ಒಳಗಾದ ಬಗ್ಗೆ ಚಿಕಿತ್ಸೆಗೆಂದು ಹಾಜರಾಗಿದ್ದು ತಾನು ಅವರನ್ನು ಪರೀಕ್ಷಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 15) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪರೀಕ್ಷಿಸಿದಾಗ ತಲೆಯ ಮೇಲ್ಭಾಗದ ಎಡಭಾಗದಲ್ಲಿ 10x1x1 ಸೆ.ಮೀ.ನಷ್ಟು ಕಡಿದು ಚಿದ್ರವಾದ ಗಾಯ, ಬಲಕೆನ್ನೆಯ ಮೇಲೆ 2x3 ಸೆ.ಮೀ ನಷ್ಟು ತರಚಿದ ಗಾಯ, ಬಲಕೆನ್ನೆ ಮತ್ತು ಬಾಯಿಯ ಬಲಭಾಗದಲ್ಲಿ 2x1x1 ಸೆ.ಮೀ.ನಷ್ಟು ಕಡಿದು ಚಿದ್ರವಾದ ಗಾಯ ಮತ್ತು ಕುತ್ತಿಗೆಯ ಎಡಭಾಗದಲ್ಲಿ ಗದ್ದದಿಂದ 2 ಸೆ.ಮೀ ಕೆಳಗೆ 4x1x1 ಸೆ.ಮೀ.ನಷ್ಟು ಕಡಿದು ಚಿದ್ರವಾದ ಗಾಯ ಆಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 16) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ದಿನ ಚಾಸಾ-1 ರವರನ್ನು ಹೆಚ್ಚಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಹೋಗುವಂತೆ ಸೂಚಿಸಿದ್ದು, ನಂತರ ಕೆ.ಎಂ.ಸಿ ಆಸ್ಪತ್ರೆ ಮಂಗಳೂರು ಮತ್ತು ಸುಚಿರಾಯು ಆಸ್ಪತ್ರೆ, ಹುಬ್ಬಳ್ಳಿ ಆಸ್ಪತ್ರೆಗಳಿಂದ ನೀಡಲಾದ ಚಾಸಾ-1 ರವರ ಡಿಸ್ ಚಾರ್ಜ್ ಸಮ್ಮರಿಯನ್ನು ನೋಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 17) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದರ ಆಧಾರದ ಮೇಲೆ ಚಾಸಾ-1 ರವರು ಕೆ.ಎಂ.ಸಿ ಆಸ್ಪತ್ರೆಯಲ್ಲಿ ದಿ.12.08.2023 ರಿಂದ 13.08.2023 ರವರೆಗೂ ಹಾಗೂ ಸುಚಿರಾಯು ಆಸ್ಪತ್ರೆಯಲ್ಲಿ ದಿ.14.08.2023 ರಿಂದ 17.08.2023 ರವರೆಗೂ ಚಿಕಿತ್ಸೆ ಪಡೆದಿರುವುದು ಹಾಗೂ ಸದರಿ ಆಸ್ಪತ್ರೆಯಲ್ಲಿ ತಲೆಯ ಎಡಭಾಗದಲ್ಲಿ ಇದ್ದ ಊತ ಮತ್ತು D-4 ಮೂಳೆ ಮುರಿತಕ್ಕೊಳಗಾದ ಬಗ್ಗೆ ಚಿಕಿತ್ಸೆ ಪಡೆದಿರುವುದು ತಿಳಿದುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 18) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅವರ ಪ್ರಕಾರ ಚಾಸಾ-1 ರವರಿಗೆ ಆದ ಮೇಲೆ ಹೇಳಿದಂತೆ ಕ್ರ.ಸಂ.1 ರಿಂದ 4 ರ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿದ್ದು, D-4 ಮೂಳೆ ಮುರಿತವು ಗಂಭೀರ ಸ್ವರೂಪದ್ದಾಗಿರುತ್ತದೆ. ಮೇಲಿನ ವಿಷಯದ ಬಗ್ಗೆ ಈಗ ನೋಡುತ್ತಿರುವ ಗಾಯದ ಪ್ರಮಾಣಪತ್ರವನ್ನು ತಾನು ನೀಡಿದ್ದು ಅದರಲ್ಲಿ ಇರುವ ಸಹಿ ತನ್ನದೆ ಎಂದು ಸಾಕ್ಷ್ಯ

ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 19) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ಕೃತ್ಯದಲ್ಲಿ ಮೃತರಾದ ಪೂಜಾ ಹಿರೇಮಠ್ ಮತ್ತು ನಿರಂಜನ್ ಹಿರೇಮಠ್ ರವರ ಮರೋಣೋತ್ತರ ಪರೀಕ್ಷೆ ಮಾಡಿರುವ ಬಗ್ಗೆ ಈಗ ನೋಡುತ್ತಿರುವ ಶವಪರೀಕ್ಷಾ ವರದಿಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 20) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪೂಜಾ ಹಿರೇಮಠ್ ರವರು ಮೆದುಳು, ಶ್ವಾಸಕೋಶಗಳು, ಲಿವರ್, ಮೆದುಳಿನ ಪದರದಲ್ಲಿ ರಕ್ತ ಹೆಪ್ಪುಗಟ್ಟುವಿಕೆ, ಶ್ವಾಸಕೋಶ ಮತ್ತು ಹೊಟ್ಟೆಯಲ್ಲಿ ರಕ್ತಸ್ರಾವವಾದ ಕಾರಣ ಸಾವನ್ನಪ್ಪಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 21) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿರಂಜನ್ ಹಿರೇಮಠ್ ರವರು ಮೆದುಳು, ಶ್ವಾಸಕೋಶಗಳು, ಲಿವರ್, ಮೆದುಳಿನ ಪದರದಲ್ಲಿ ರಕ್ತ ಹೆಪ್ಪುಗಟ್ಟುವಿಕೆ ಮತ್ತು ಹೊಟ್ಟೆಯಲ್ಲಿ ರಕ್ತಸ್ರಾವವಾದ ಕಾರಣ ಮೃತಪಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 22) ಪ್ರಾಸಾ-11 ಆದರ್ಶ್.ಎಂ.ಎಸ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.12.08.2023 ರಂದು ಸ.4.00 ಗಂಟೆ ಸಮಯಕ್ಕೆ ಅವರು ಠಾಣೆಯಲ್ಲಿ ಇರುವಾಗ ಠಾಣಾ ಹೆಚ್.ಸಿ. ತೇಜಪ್ ಮೂರ್ತಿ ರವರು ಚಾಸಾ-1 ರವರ ದೂರು ಹೇಳಿಕೆಯನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಿಸಿಕೊಂಡು ಠಾಣೆಯಲ್ಲಿ ಹಾಜರುಪಡಿಸಿದ್ದನ್ನು ಸ್ವೀಕರಿಸಿ ಠಾ.ಮೊ.ಸಂ.106/2023 ರಂತೆ ಪ್ರ.ವ.ವರದಿ ದಾಖಲಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 23) ಪ್ರಾಸಾ-11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-19 ರವರ ನಿರ್ದೇಶನದಂತೆ ಅದೇದಿನ ರಾ.9.00 ಗಂಟೆಗೆ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಬೇಟಿ

ನೀಡಿ ಅಲ್ಲಿ ಚಾಸಾ-7 ಮತ್ತು 8 ರವರನ್ನು ಪಂಚರನ್ನಾಗಿ ನೇಮಕ ಮಾಡಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 24) ಫ್ರಾಸಾ-11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಚಾಸಾ-4 ರಿಂದ 6 ರವರ ಸಮಕ್ಷಮ ಮೃತ ನಿರಂಜನ್ ಹಿರೇಮಠ್ ರವರ ಶವಪಂಚನಾಮೆಯನ್ನು ಜರುಗಿಸಿ ಫೋಟೋಗಳನ್ನು ತೆಗೆಸಿ, ನಂತರ ಮೃತ ದೇಹವನ್ನು ಶಪಪರೀಕ್ಷೆಗೆಂದು ಠಾಣಾ ಸಿಬ್ಬಂದಿ ಮಲ್ಲಿಕಾರ್ಜುನ್ ರವರ ಹಸ್ತ ಕಳುಹಿಸಿ, ಆ ದಿನ ಚಾಸಾ-5 ರವರ ಹೇಳಿಕೆಯನ್ನು ದಾಖಲಿಸಿಕೊಂಡು, ನಂತರ ಕಡತವನ್ನು ಮುಂದಿನ ತನಿಖೆ ಸಂಬಂಧ ಚಾಸಾ-19 ರವರಿಗೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 25) ಫ್ರಾಸಾ-13 ಸೋಮೇಗೌಡ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ:18.08.2023 ರಂದು ಪ್ರಕರಣದ ಕಡತವನ್ನು ಚಾಸಾ-18 ರವರಿಂದ ಸ್ವೀಕರಿಸಿಕೊಂಡು, ತನಿಖೆ ಮುಂದುವರೆಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 26) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಮೃತ ಪಟ್ಟಂತಹ ಶ್ರೀಮತಿ ಪೂಜಾ ಹಿರೇಮಟ್ ಮತ್ತು ನಿರಂಜನ್ ಹಿರೇಮಟ್ ರವರ ಮೃತ ದೇಹವನ್ನು ಮೂಡಿಗೆರೆಯ MGM ಆಸ್ಪತ್ರೆಯ ಶವಗಾರದಲ್ಲಿದ್ದು, ಶವತನಿಖೆ ಸಂಬಂಧ ಚಾಸಾ-17 ರವರನ್ನು ಕರೆದುಕೊಂಡು ಆಸ್ಪತ್ರೆಯ ಶವಾಗಾರದ ಬಳಿ ಭೇಟಿ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 27) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಶವಾಗಾರದ ಬಳಿ ಎರಡು ಶವಗಳು ಇರುವುದರಿಂದ ಒಂದು ಮೃತ ದೇಹದ ಪರೀಕ್ಷೆಯನ್ನು ಕೈಗೊಳ್ಳಲು ಚಾಸಾ-18 ರವರಿಗೆ ಸೂಳಿಸಿದ್ದು, ಒಂದು ಮೃತ ದೇಹದ ತನಿಖೆಯನ್ನು ತಾನು ಚಾಸಾ-2 ರಿಂದ 4 ರವರ ಸಮಕ್ಷಮ ಶವ ತನಿಖೆಯನ್ನು ನಡೆಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 28) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಶವ ತನಿಖೆ ಸಮಯದಲ್ಲಿ

ಹಾಜರಿದ್ದ ಮೃತ ಪೂಜಾ ರವರ ತಾಯಿಯಾದ ಚಾಸಾ-6 ರವರ ಹೇಳಿಕೆಯನ್ನು ದಾಖಲು ಮಾಡಿ, ಚಾಸಾ-6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 29) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಮೃತ ಪೂಜಾ ಹಿರೇಮಟ್ ರವರ ಮರಣೋತ್ತರ ಪರೀಕ್ಷೆಯನ್ನು ನೀಡುವಂತೆ ಚಾಸಾ-15 ರವರಿಗೆ ಮನವಿಯನ್ನು ನೀಡಿ, ಮೃತ ಪೂಜಾ ರವರ ಮರಣೋತ್ತರ ಪರೀಕ್ಷೆಯ ನಂತರ ಸದರಿಯವರ ಮೃತ ದೇಹವನ್ನು ಅವರ ಕುಟುಂಬಸ್ಥರಿಗೆ ಅಂತ್ಯಕ್ರಿಯೆಯನ್ನು ನೆರವೇರಿಸಲು ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 30) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.13.08.2023 ರಂದು ಚಾಸಾ-2 ರವರ ಸಮಕ್ಷಮ ಚಾಸಾ-2 ರವರು ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ಚಾಸಾ-9 ಮತ್ತು 10 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿ, ಸದರಿ ಸಮಯದಲ್ಲಿ ಫೋಟೋ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 31) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಚಾಸಾ-2 ರವರ ಹೇಳಿಕೆಯನ್ನು ಪಡೆದು, ನಂತರ ಅದೇ ದಿನ ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿದಾರರುಗಳಾದ ಚಾಸಾ-13 ಮತ್ತು 14 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 32) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ಹಿಂದೆ ಅಮಾನತುಪಡಿಸಿಕೊಂಡಿದ್ದ ವಾಹನವನ್ನು ಠಾಣೆಯ ಆವರಣದಲ್ಲಿ ನಿಲ್ಲಿಸಿದ್ದು ಸದರಿ ದಿನ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ, ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 33) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಚಂದ್ರಶೇಖರ್,

ಸಂಚಾರಿ ನಿಯಂತ್ರಕ ರವರು KA-40-F-0506 ರ ಸರ್ಕಾರಿ ಬಸ್ ನ್ನು ಗುರುತಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 34) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ವಾಹನವನ್ನು ಚಾಸಾ-11 ಮತ್ತು 12 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿ, ಸದರಿ ವಾಹನವನ್ನು ಮೂಡಿಗೆರೆಯ ಠಾಣಾ ಪಿ.ಎಫ್ ನಂಬರ್ 122/2023 ರಲ್ಲಿ ನೊಂದಾಯಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 35) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಚಾಸಾ-3 ರವರ ಹೇಳಿಕೆಯನ್ನು ಪಡೆದು, ದಿ.14.08.2023 ರಂದು ಸದರಿ ಪ್ರಕರಣದಲ್ಲಿ ಅಪಘಾತಕ್ಕೊಳಗಾದ ಬಸ್ ನ ವರದಿಯನ್ನು ನೀಡುವಂತೆ ಚಾಸಾ-16 ರವರಿಗೆ ಮನವಿಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 36) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.15.08.2023 ರಂದು ಸಹಾಯಕ ಸಂಚಾರಿ ನಿಯಂತ್ರಕರು ಆರೋಪಿಯನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತಾರೆ ಮತ್ತು ಬಸ್ ನ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 37) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯವರಿಂದ ಚಾಲನ ಪರವಾನಿಗೆ, ಆರ್.ಸಿ, ಇನ್ಸ್ ಸ್ಯೂರೆನ್ಸ್, ಎಫ್.ಸಿ, ನಿರ್ವಾಹಕರ ಮಾರ್ಗ ಪತ್ರ, ಕರ್ತವ್ಯ ದೃಢೀಕರ ಪತ್ರ ಮತ್ತು ಇತರೆ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 38) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಆರೋಪಿಗೆ Cr.P.C ಕಲಂ 41 ಎ ರಡಿಯಲ್ಲಿ ನೋಟೀಸನ್ನು ಜಾರಿ ಮಾಡಿ, ಅದೇ ದಿನ ನಷ್ಟ ಭರ್ತಿ ಪರಿಹಾರ ಪ್ರತಿಯನ್ನು ಪಡೆದು ಜಗನ್ನಾತ್ ರವರಿಗೆ ಬಸ್ ನ್ನು ಬಿಡುಗಡೆ ಮಾಡಿರುತ್ತೇನೆ ಎಂದು ಸಾಕ್ಷ್ಯ

ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 39) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.07.09.2023 ರಂದು ಅಪಘಾತಕ್ಕೀಡಾದ KA-05-NE-9872 ಸ್ವಿಫ್ಟ್ ಕಾರನ್ನು ಪರಿಶೀಲಿಸಿ ವರದಿ ನೀಡುವಂತೆ ಕೋರಿ, ಚಾಸಾ-16 ರವರಿಗೆ ಮನವಿಯನ್ನು ನೀಡಿ, ಅದೇ ದಿನ ಚಾಸಾ-5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 40) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿಯವರು ಅಪಘಾತಕ್ಕೀಡಾದ ಕಾರಿನ ದಾಖಲಾತಿಯನ್ನು ಹಾಜರುಪಡಿಸಿದ್ದು, ನಂತರ GPA ಆಧಾರದ ಮೇಲೆ ಚಾಸಾ-5 ರವರಿಗೆ ಸದರಿ ಕಾರನ್ನು ಬಿಡುಗಡೆ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 41) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.04.10.2023 ರಂದು ಚಾಸಾ-15 ರವರಿಂದ ಚಾಸಾ-1 ರವರ ಗಾಯದ ಪ್ರಮಾಣ ಪತ್ರ ಮತ್ತು ಮೃತರ ಮರಣೋತ್ತರ ಪರೀಕ್ಷಾ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 42) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.18.10.2023 ರಂದು ಅಪಘಾತಕ್ಕೀಡಾದಾ ಎರಡೂ ವಾಹನಗಳ IMV ವರದಿಯನ್ನು ಚಾಸಾ-16 ರವರಿಂದ ಪಡೆದು, ಅದೇ ದಿನ ಚಾಸಾ-1 ರವರನ್ನು ಠಾಣೆಗೆ ಕರೆದು ಅವರ ಮುಂದುವರೆದ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 43) ಫ್ರಾಸಾ-13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತನಿಖೆ ಕಾಲದಲ್ಲಿ ಫೋಟೋಗಳನ್ನು ತೆಗೆದ ಚಾಸಾ-17 ರವರಿಂದ 65 ಬಿ ದೃಢೀಕೃತ ಪ್ರತಿಯನ್ನು ಪಡೆದುಕೊಂಡು, ನಂತರ ಇದುವರೆಗಿನ ತನಿಖೆಯಲ್ಲಿ ಆರೋಪಿಗಳ ವಿರುದ್ಧ ಆರೋಪವು ಸಾಬೀತಾದ ಕಾರಣ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 44) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ ?

ಉತ್ತರಃ

ಪ್ರಶ್ನೆಃ 45) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

Sd/-
C/c ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ನ್ಯಾಯಾಲಯ, ಮೂಡಿಗೆರೆ.

ಮೂಡಿಗೆರೆ
ದಿನಾಂಕಃ 06.02.2026.